ಬಲಿಪಶುವಾದವರ ಕ್ಷೋಭೆಯಿಂದಲೇ ಬಂದಿವೆ. 'ನಿರ್ಭಯ' ಕೇಸ್‌ನ ನಂತರ ವರ್ಮಾ ಕಮಿಷನ್ ಮಾಡಿದ ಶಿಫಾರಸುಗಳು ತುಂಬಾ ಮುಖ್ಯವಾದವು. ನಮ್ಮ ಸುತ್ತಲೂ ಇರುವ ವಾತಾವರಣ ಮುಖ್ಯವಾಗಿ ಎಳೆಯ ಮಕ್ಕಳ ಮನಸ್ಸುಗಳನ್ನು ಕಲುಷಿತಗೊಳಿಸುವ ಅನೇಕ ರೀತಿಯ ಜಾಡ್ಯಗಳು ಈ ಸಮಾಜದೊಳಗೆ ಎಲ್ಲಿಂದ ಬಂದಿದೆಯೋ ನೀನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕಿದೆ. ಈ ನ್ಯಾಯವನ್ನು ಶಿಕ್ಷೆ ಆಗಿ ನೋಡುವ ಪದ್ಧತಿ ಇರಬಹುದು. ಇದೆಲ್ಲಕ್ಕೂ ಮುಖ್ಯವಾಗಿ ನೀನು ನಿನ್ನ ಪರಿಸ್ಥಿತಿಯನ್ನು, ನಿನ್ನ ನೋವನ್ನು ಅರ್ಥಪೂರ್ಣವಾಗಿ ಗ್ರಹಿಸಲು ನಿನಗೆ ಮಾರ್ಗಸೂಚಿಯಾಗಬಲ್ಲ ಕೆಲವು ಪುಸ್ತಕಗಳು ನನ್ನ ಬಳಿ ಇವೆ. ಕೆಲವು ಪುಸ್ತಕಗಳನ್ನು ಈಗಲೇ ಕಳಿಸುತ್ತೇನೆ. ಉಳಿದವನ್ನು ನಿಧಾನವಾಗಿ ಕಳಿಸುವೆ" ಎಂದರು ಜಿವಿ.

ಬಾಲಗೋಪಾಲ್ ಅವರ ಕೆಲವು ಪುಸ್ತಕಗಳನ್ನು ಕಳುಹಿಸುತ್ತಾ "ಈ ಪುಸ್ತಕಗಳನ್ನು ಓದು. ಈ ಸಮಾಜದಲ್ಲಿಯ ಹಿಂಸೆಗೆ ಕಾರಣವಾದ ಅನೇಕ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಇವು ನಿನಗೆ ದಿಕ್ಸೂಚಿಯಾಗಬಲ್ಲವು" ಎಂದು ಬರೆದಿದ್ದರು.

ಎಷ್ಟೋ ದಿನ ಮನೆಯಲ್ಲಿದ್ದೆ. ಆಫೀಸ್‌ಗೆ ಹೋಗುತ್ತೇನೆಂದೆ. ಅಮ್ಮ ಒಪ್ಪಲಿಲ್ಲ. ನಂತರ ಮನಸ್ಸಿಲ್ಲದೇ ಅಲ್ಲಿ ಬೇಡ. ಹೊಸ ಕೆಲಸಕ್ಕೆ ಸೇರಿಕೋ ಎಂದಳು. ಹೊಸ ಕೆಲಸವಾದರೇನಂತೆ. ಮೊದಲು ಮಾಡುತ್ತಿದ್ದ ಉದ್ಯೋಗ ಬಿಟ್ಟದ್ದು ಯಾಕೆಂಬುದನ್ನಾದರೂ ಹೇಳಬೇಕಾಗುತ್ತೆ ತಾನೆ.

ಹಾಗೆ ನೋಡಿದರೆ ಇಲ್ಲಿ ಈ ವಿಷಯ ಎಲ್ಲರಿಗೂ ಗೊತ್ತಿದೆ. ಅಮ್ಮನನ್ನು ಹೇಗೋ ಒಪ್ಪಿಸಿ ಮತ್ತೆ ಕೆಲಸಕ್ಕೆ ಹೊರಟೆ. ಅವರೆಲ್ಲರೂ ನನ್ನನ್ನು ತುಂಬಾ ಆತ್ಮೀಯವಾಗಿ ಬರಮಾಡಿಕೊಂಡರು. ಆದರೆ, ಆ ಆತ್ಮೀಯತೆಯಲ್ಲಿಯೇ ಏನೋ ತಿಳಿಯದ ಇಬ್ಬಂದಿತನ. ಅವರು ನನ್ನೊಂದಿಗೆ ಸರಿಯಾಗಿ ನಡೆದುಕೊಳ್ಳದಿದ್ದರೆ ಅವರನ್ನು ಮಾಧ್ಯಮಗಳಾಗಲಿ, ಉಳಿದವರಾಗಲಿ ಏನಾದರೂ ತರಾಟೆಗೆ ತೆಗೆದುಕೊಂಡಾರೆಂಬ ಭೀತಿಯೂ ಇರಬಹುದು. ಹಾಗಾಗಿ ಹೆಚ್ಚು ಅಕ್ಕರೆ. ನಾನು ಇನ್ನೆಂದೂ ಈ ಹಿಂದಿನಂತೆ ಉದ್ಯೋಗಸ್ಥಳಾಗಲಾರೆನೆ, ಹೊಸ ಉದ್ಯೋಗ ಹುಡುಕಬೇಕಿದೆಯೆ...

ಅಷ್ಟೇ ಅಲ್ಲ ಯಾಕೋ ಸುಮ್ಮನೇ ಕೋಪ ನೆತ್ತಿಗೇರುತ್ತದೆ. ಈ ಹಿಂದೆ ಹೀಗಿರಲಿಲ್ಲ. ಸ್ವಲ್ಪ ಕಿರಿಕಿರಿಯೆನಿಸುತ್ತಿತ್ತಷ್ಟೆ. ನಡುವೆ ಯಾರಾದರೂ ಈ ಕೇಸ್ ಬಗ್ಗೆ ಮಾತಾಡಬಹುದೆಂದು ಸ್ವಲ್ಪ ದಿಗಿಲಿತ್ತು. ಡಾಕ್ಟರ್‌ಗೆ ನನ್ನ ಮನಸ್ಥಿತಿಯ ಬಗ್ಗೆ ಹೇಳಿದ್ದೆ. ನಡೆದ ದಾಳಿ ಸಣ್ಣದೇನಲ್ಲ. ಅಷ್ಟೇ ಅಲ್ಲ ಹಾರ್ಮೋನಲ್ ಡಿಫಿಯನ್ಸಿ... ಅವರನ್ನು ಕಪಾಳಕ್ಕೆ ಹೊಡೆಯಬೇಕೆನ್ನುವಷ್ಟು ಸಿಟ್ಟು ಬರುತ್ತಿರುತ್ತದೆ. ನನ್ನ ಮಾನಸಿಕ ಘರ್ಷಣೆಯನ್ನು ಲಾವಾದಂತೆ ಹೊತ್ತಿಸಿದ ಅವರಿಗೆ ಯಾವ ಶಿಕ್ಷೆಯಾಗಬೇಕು.

ಅವರಿಗೆ ಶಿಕ್ಷೆ ಪ್ರಕಟವಾಗಲಿದೆಯೆಂದು ತಿಳಿದಾಗಿನಿಂದಲೂ ನನ್ನ ಮನಸ್ಸೆಲ್ಲ ಗೊಂದಲಮಯವಾಗಿದೆ. ಸಂಘರ್ಷ. ವಿಪರೀತವಾದ ನಿರ್ಲಿಪ್ತತೆ. ನಾಳೆಯೇ ಅವರಿಗೆ ಶಿಕ್ಷೆಯಾಗುತ್ತಿದೆ. ನಡೆದ ಅನ್ಯಾಯವನ್ನು ಸರಿದೂಗಿಸಬಲ್ಲ ಶಿಕ್ಷೆ ಇಲ್ಲ ಅಂತ ಕಾಣುತ್ತೆ. ನಿಜಕ್ಕೆ ಶಿಕ್ಷೆಯೆಂದರೆ ಏನು!? ಚಿಕ್ಕವಳಿರುವಾಗ ಸ್ಕೂಲ್ ಟೀಚರ್ ಕ್ಲಾಸ್ ನಡೆಯಬೇಕಾದರೆ ಮಾತಾಡಿದರೆ, ಪ್ರಾಜೆಕ್ಟ್ ವರ್ಕ್ ಮಾಡಿರದಿದ್ದರೆ ಕೊಡಬಹುದಾದ ಪನಿಶ್ಮೆಂಟ್‌ಗೆ ಹೆದರಿ ಅಂತಹ ತಪ್ಪುಗಳನ್ನು ಮಾಡದವರಿದ್ದಾರೆಯೇ? ಏನೋ! ನಿಜಕ್ಕೆ ತಾನೆಂದಾದರೂ ಹೆದರಿದ್ದುಂಟೆ. ಹಿಂಸೆಗೆ ಅವಕಾಶವಿಲ್ಲದ ಪರಿಸ್ಥಿತಿಗಳಿದ್ದರೆ ಎಷ್ಟು ಚೆನ್ನ. ಆಗ ಯಾರನ್ನು ಗಲ್ಲಿಗೇರಿಸಬೇಕು. ಇಲ್ಲ ಜೀವಾವಧಿ ಕೈದಿಯನ್ನಾಗಿಸಬೇಕು... ಎನ್ನುವಂತಹ ಚರ್ಚೆಗಳಿರುತ್ತಿರಲಿಲ್ಲ. ಮತ್ತೆ ಫೋನ್ ವೈಬ್ರೇಷನ್ ಜುಮ್ ಎನ್ನುತ್ತಿದೆ. ಅಲ್ಲಿಂದ ಮೆಲ್ಲನೆ ಮನೆಯ ಕಡೆ ಹೆಜ್ಜೆ ಹಾಕಿದೆ.